Reg. No.

**BCMKAL 103**

## ಗುಣಾಂಕ ಆಧಾರಿತ ಮೊದಲನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2014

**(2013-14 Batch and Onwards)**

**ಕನ್ನಡ ಭಾಷಾ ಪತ್ರಿಕೆ – I**

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 80

### ಭಾಗ – 1

### ಕಾವ್ಯ

I. ಅ) ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಚಂದ್ರಹಾಸನು ವಿಷಯೆಯನ್ನು ವಿವಾಹವಾಗಲು ಕಾರಣವಾದ ಸನ್ನಿವೇಶವನ್ನು ವಿವರಿಸಿ.

2) 'ಬೆಂಗಳೂರಿನ ಹಾಡು' ಕವನದ ಹಿನ್ನೆಲೆ ಮತ್ತು ಸ್ವಾರಸ್ಯವನ್ನು ವಿವರಿಸಿರಿ.

ಆ) ಕೆಳಗಿನ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : (1×5=5)

1) ಮಾಸ್ತಿಯವರ ವ್ಯಕ್ತಿ ಚಿತ್ರವನ್ನು ನಿಸಾರ್ ಅಹಮದ್‌ರವರು ಹೇಗೆ ಬಿಂಬಿಸಿದ್ದಾರೆ ?

2) ಮನಸ್ಸಿನ ಚಂಚಲತೆಯ ಕುರಿತು ಬಸವಣ್ಣನವರ ನಿಲುವನ್ನು ಬರೆಯಿರಿ.

ಇ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : (2×3=6)

1) ಮದನ

2) ವಚನಗಳು

3) ಕೆ.ಎಸ್. ನರಸಿಂಹಸ್ವಾಮಿ

II. ಅ) ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : (1×5=5)

1) ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ? ಬಡವನಯ್ಯ
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಶಿರ ಹೊನ್ನಕಳಸವಯ್ಯ
ಕೂಡಲ ಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ !

ಪು.ತಿ.ನೋ.

2) ಸುತ್ತ ನೋಡುವಳೊಮ್ಮೆ ನೂಪುರವಲುಗದಂತೆ।
ಹತ್ತೆ ಸಾರುವಳೊಮ್ಮೆ ಸೋಂಕಲೆಂತಹುದೆಂದು।
ಮತ್ತೆ ಮುರಿದಪಳೊಮ್ಮೆ ಹೆಜ್ಜೆ ಹೆಜ್ಜೆಯ ಮೇಲೆ ಸಲ್ವಳಮ್ಮದೆ ನಿಲ್ವಳು।
ಚಿತ್ತದೊಳು ನಿಶ್ಚೈಸಿ ನೆರೆಯಲೆಳಸುವಳೊಮ್ಮೆ
ಹೊತ್ತಲ್ಲದನುಚಿತಕೆ ಬೆದರಿ ಹಿಂಗುವಳೊಮ್ಮೆ
ತತ್ತಳದ ಬೇಟದೊಳು ಬೆಂಡಾಗಿ ವಿಷಯೆ
ನಿಂದಿರ್ದಳಾತನ ಪೊರೆಯೊಳು!

ಆ) ಯಾವುದಾದರೂ **ಎರಡು** ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2×3=6)**

1) ಮಾತೇನೊ ಕಠಿಣ ಹೊರಗೆಲ್ಲ, ಹುಲಿಮುದ್ದನ್ನಿ ?
ಸಹಿಸಿದರೆ ಮಾತ್ರ ಸಿಹಿಯಾದ ಈ ಸೌಜನ್ಯ।

2) ನನ್ನ ಗಂಡನ ಜೊತೆಯ ಜೀತಗಾರರ ಕಥೆಯು ಯಾವ ಹಾಡಿನ ಒಳಗೂ ಮೂಡಲಿಲ್ಲ।

3) ಸೊಂಡಿಲಾಡಿಸುತ್ತ ಬರುವುದದೋ ದೇವಕುಂಜರ

III. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯ ಅಥವಾ **ಒಂದೊಂದು** ಪದದಲ್ಲಿ ಉತ್ತರಿಸಿರಿ : **(5×1=5)**

1) ಚಂದ್ರಹಾಸನು ಹುಟ್ಟಿದ ನಕ್ಷತ್ರ ಯಾವುದು ?
2) ವಾಜಿ ಪದದ ಅರ್ಥವೇನು ?
3) ಮಾಸ್ತಿಯವರು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದರು ?
4) ಕೆಂಪೇಗೌಡ ಯಾರ ಬಳಿ ಜೀತಕ್ಕಿದ್ದನು ?
5) ಕಾವೇರಿ ನದಿಗೆ ಸ್ನಾನಕ್ಕೆ ಕವಿಯೊಂದಿಗೆ ಬಂದಿದ್ದ ವ್ಯಕ್ತಿ ಯಾರು ?

## ಭಾಗ - 2

## ಗದ್ಯ

IV. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಪ್ರಭುಲಿಂಗನ ಬಾಲ್ಯ ಮತ್ತು ವಿದ್ಯಾಭ್ಯಾಸದ ಅನುಭವಗಳನ್ನು ವಿವರಿಸಿರಿ.
2) 'ಬುಲ್ ಡೋಜರ್ ಸಂಸ್ಕೃತಿ' ನಮಗೆ ಪ್ರಿಯವಾಗುತ್ತಿರುವ ಸಂಗತಿ ಹೇಗೆ ? ವಿವರಿಸಿ.

ಆ) ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಜಲಜ ಚಿಕ್ಕಿಯ ವ್ಯಕ್ತಿತ್ವ 'ಒಂದು ಒಸಗೆ ಒಯ್ಯುವುದಿತ್ತು' ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.
2) ನೋಂಬು ಮಾಡಿದ ಹುಡುಗನ ಕತೆಯ ಹಿಂದಿರುವ ಧರ್ಮ ಸೂಕ್ಷ್ಮಗಳನ್ನು ವಿವರಿಸಿ.

ಇ) ಯಾವುದಾದರೂ **ಒಂದರ** ಟಿಪ್ಪಣಿ ಬರೆಯಿರಿ : (1×5=5)

1) ನಂಬಿಕೆಗಳು ಮತ್ತು ಆಚರಣೆಗಳು

2) ದೇವರು ಮತ್ತು ಸೃಷ್ಟಿ.

V. ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×5=5)

1) ''ಹೆಮ್ಮಕ್ಕಳು ಎಲ್ಲಿದ್ದರೂ ಒಂದೇ ಮಗಾ... ಎಲ್ಲವನ್ನೂ ಸಹಿಸಿಕೊಳ್ಳಬೇಕು'' ಜಮೀಲಾಳ ತಾಯಿಯ ಈ ಮಾತನ್ನು ಸಮರ್ಥಿಸಿ ಬರೆಯಿರಿ.

2) ಶೋಷಿತ ವರ್ಗದ ಆಚರಣೆಗಳು 'ಮಣೆಗಾರ' ಲೇಖನದಲ್ಲಿ ಬಿಂಬಿತವಾಗಿರುವುದನ್ನು ಬರೆಯಿರಿ.

3) ಬುಲ್‌ಡೋಜರ್ ನಮಗೆ ಪ್ರಿಯವಾಗುತ್ತಿರುವುದು ಏಕೆ ? ವಿವರಿಸಿ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯ ಅಥವಾ **ಒಂದೊಂದು** ಪದದಲ್ಲಿ ಉತ್ತರಿಸಿರಿ : (4×1=4)

1) ಎ.ಎನ್. ಮೂರ್ತಿರಾಯರು ಯಾವ ಜಿಲ್ಲೆಯವರು ?

2) ಪ್ರಭುಲಿಂಗನ ತಂದೆಯ ಹೆಸರೇನು ?

3) ಜಲಜಾಚಿಕ್ಕಿಗೆ ಚಿಕ್ಕಪ್ಪಯ್ಯನ ಒಸಗೆಯನ್ನು ಒಯ್ದವರಾರು ?

4) ಅದ್ದುವಿನ ಗೆಳೆಯನ ಹೆಸರೇನು ?

## ಭಾಗ - 3

## ಕ್ರಿಯಾತ್ಮಕ ಕನ್ನಡ

VII. **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಆದೇಶ ಪತ್ರವೆಂದರೇನು ? ಅದರಲ್ಲಿರಬೇಕಾದ ಪ್ರಮುಖ ಅಂಶಗಳಾವುವು ? ಮಾದರಿ ಪತ್ರ ಒಂದನ್ನು ಬರೆಯಿರಿ.

2) ವ್ಯಾವಹಾರಿಕ ಪತ್ರಗಳ ಪ್ರಮುಖ ಲಕ್ಷಣಗಳನ್ನು ವಿವರಿಸಿ, ಮಾದರಿ ಪತ್ರವನ್ನು ಬರೆಯಿರಿ.

VIII. ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×5=5)

1) ಆರ್.ಟಿ.ಸಿ. ಎಂದರೇನು ? ಅದರಲ್ಲಿರುವ ವಿವಿಧ ಅಂಶಗಳ ಕುರಿತು ಬರೆಯಿರಿ.

2) ಭೂಮಿಯ ವಿವಿಧ ಪ್ರಭೇದಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

IX. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯ ಅಥವಾ **ಒಂದೊಂದು** ಪದದಲ್ಲಿ ಉತ್ತರಿಸಿರಿ : (2×1=2)

1) ಕೊಡಗು ಜಿಲ್ಲೆಯಲ್ಲಿರುವ ಭೂಪ್ರಭೇದ ಯಾವುದು ?

2) ಸ್ಥಿರ ಸ್ವತ್ತು ಎಂದರೇನು ?

---